ಸಾಮಾಜಿಕ ಪರಿವರ್ತನೆಗಾಗಿ

ISSN: 2582-4856

# ಭೀಮವಾದ

Bheemavaadha

Kannada Monthly

ಮಾಸಪತ್ರಿಕೆ

September- 2023 | Rs 30/- Vol-14 | Issue-01



## ಸನಾತನ ಬ್ರಾಹ್ಮಣರ ಪ್ರಾಬಲ್ಯವನ್ನು ದಿಟ್ಟವಾಗಿ ಎದುರಿಸಿದ ಪೆರಿಯಾರ್

ದೇವರ ಧರ್ಮ...!

# ನಾವೆಲ್ಲರೂ ಬಾಬಾ ಸಾಹೇಬರ ಋಣದ ಮಕ್ಕಳು, ಹಾಗಾದರೆ ನಾವೂ ಮಾಡುತ್ತಿರುವುದೇನು?

• ಪಂಡಿತ ಬಿ. ಮದಗುಣಕಿ, ಕಲಬುರಗಿ

ಹುಟ್ಟುತ್ತಲೇ ನಾವೂ ಬಾಬಾ ಸಾಹೇಬರ ಸಂವಿಧಾನದ ಫಲಾನುಭವಿಗಳಾಗಿ, ಅವರು ಮಾಡಿಕೊಟ್ಟ ಅವಕಾಶಗಳಿಂದ ಸ್ಥಾನಮಾನಗಳನ್ನು ಗಳಿಸಿಕೊಂಡು, ಸಿರಿತನ ವೈಭೋಗದ ಜೀವನ ಅನುಭವಿಸಿ. ಜನಿಸಿ ಬಂದ ಸಮಾಜಕ್ಕೆ ಹಿಂದುರಿಗಿ ನೋಡದೆ,ಹೆತ್ತ ತಂದೆ ತಾಯಿಯನ್ನು ಬಿಟ್ಟು ಪಟ್ಟಣ ಸೇರಿ, ಅಪ್ಪ ಅಮ್ಮನಿಲ್ಲದ ಅರಮನೆಗಳನ್ನು ಕಟ್ಟಿಕೊಂಡು. ಹೆಸರಿಗೆ ಮಾತ್ರ ಬುದ್ಧರ ಸ್ಮರಿಸಿ,ಮರೆಸಿ ಜೀವನವಿಡಿ ಅನುಸರಣೆಗಳಿಲ್ಲದ ಆಚರಣೆಗಳು ಮಾಡಿ. ಬಾಬಾಸಾಹೇಬರ ವಿಚಾರಗಳ ವಿರುದ್ಧವಾಗಿ ಮೌಢ್ಯತೆಗಳೇ ಮುನ್ನಡೆಸಿಕೊಂಡು ಬದುಕುತ್ತಿರುವ ನಾವೂಗಳು ಹೇಗೆ ತಾನೇ ಅಂಬೇಡ್ಕರ್ ಮಕ್ಕಳಾಗಲು ಸಾಧ್ಯ? ಯಾರಿಗಾಗಿ, ಏತಕ್ಕಾಗಿ ಸಾಮಾಜಿಕ ಪರಿವರ್ತನ ಚಳುವಳಿಯನ್ನು ಬಾಬಾಸಾಹೇಬರು ಮುನ್ನಡೆಸಿಕೊಂಡು ಬಂದರು. ಬಾಬಾಸಾಹೇಬರ ಆ ಚಳುವಳಿ ಎಲ್ಲಿ? ನಿಂತಿದೆ, ಅದರ ವಾರಸುದಾರರು ಯಾರು? ಅದನ್ನು ಮುಂದಕ್ಕೆ ತರಲು ಪ್ರಯತ್ನಿಸಬೇಕಾದವರು ಯಾರು? ಯಾರನ್ನೋ ಮೆಚ್ಚಿಸಲು,ಇನ್ಯಾವುದೋ ಗೆಲ್ಲಿಸಲು ಹೋಗಿ? ಇಂದು ನಾವುಗಳು ನಿಜವಾಗಲೂ ಯಾರಿಗೆ ಅಪಮಾನ ಮಾಡುತ್ತಿದ್ದೇವೆ? ಯಾರ ಮಾರ್ಗ ಮರೆತಿದ್ದವೆ? ಯಾರ ಪರವಾಗಿ ನಿಂತಿದ್ದೇವೆ? ಎಂಬ ಸತ್ಯ ನಮಗೆ ಅರಿವಿದೆಯಾ? ಮನುವಾದವೇ ಕಿತ್ತೊಗಿಯಬೇಕೆಂದು ಬಾಬಾಸಾಹೇಬರು ನಾನು ಹಿಂದುವಾಗಿ ಹುಟ್ಟಿದ್ದೇನೆ ಆದರೆ ಹಿಂದುವಾಗಿಸಾಯಲಾರೆ ಎಂಬ ಮಾತು ಅವರಿಗೆ ಮಾತ್ರ ಸೀಮಿತವಾಯಿತೆ? ಇವತ್ತು ಅದೆ ಮನುವಾದಿಗಳ ಸಾಂಸ್ಕೃತಿಕ, ಸಂಪ್ರದಾಯಗಳಿಗೆ ಶಕ್ತಿಯಾಗಿ ನಿಂತವರಾರು? ನಾವು ಯಾರ ಜೊತೆಗೆ ನಿಂತು ಯಾವ ಸಿದ್ಧಾಂತಕ್ಕೆ ಬಲ ನೀಡುತ್ತಿದ್ದೇವೆ? ಬಾಬಾಸಾಹೇಬರು ಭೋದಿಸಿದ 22 ಪ್ರತಿಜ್ಞೆಗಳು ಪಾಲಿಸಬೇಕಾದವರು ಯಾರು? ನಾನು ನನ್ನ ಈ ಜನಗಳು ದೇಶವನ್ನು ಆಳುವ ವರ್ಗವಾಗುವುದನ್ನು ಕಣ್ಣಾರೆ ನೋಡಬೇಕು ಎಂಬ ಮಾತು ಎಲ್ಲಿ ಕಳೆದುಹೋಯಿತು? ಇಲ್ಲಾ ನಾವು ನಮ್ಮ ದೈನಂದಿನ ಸ್ವಾರ್ಥ, ಸ್ವಪ್ರತಿಷ್ಠೆಯ ಜೀವನದಲ್ಲಿ ಮರೆತಿದ್ದವಾ? ಹೋರಾಟ ಎಂದರೆ ರಾಜ್ಯಾಧಿಕಾರ ಹಿಡಿಯುವುದೇ ಹೋರಾಟ,ಅದಕ್ಕಾಗಿ ನಮಗೆ ಸರ್ವತ್ಯಾಗಕ್ಕೂ ಸಿದ್ದರಾಗಿ, ಒಂದಾಗಿ ಎಂದ ಅಂಬೇಡ್ಕರರ ವಾಣಿ ನಮ್ಮ ಸಂಘಟನೆಗಳಿಗೆ ಕೇಳಿಸಿದೆಯಾ? ಇಂದು ಬಾಬಾಸಾಹೇಬರ ಹೆಸರಲ್ಲಿ ಸಂಘಗಳು ಕಟ್ಟಿಕೊಂಡು ಯಾರ? ರಕ್ಷಣೆಗೆ ಟೊಂಕಕಟ್ಟಿ ನಿಂತಿದೆವು? ನಮ್ಮ ನಮ್ಮ ಸಂಘಟನೆಯ ಗುರಿ ಉದ್ದೇಶಗಳಾದರೂ ಏನು? ಬಾಬಾಸಾಹೇಬರ ಸಂವಿಧಾನದಿಂದ ಅಧಿಕಾರಕ್ಕೆ ಬಂದು, ಅದೆ ಸಂವಿಧಾನ ನಾವು ಬದಲಿಸುತ್ತೇವೆ ಎಂಬುವರ ಜೊತೆಗೆ ನಿಂತು. ಬಾಬಾಸಾಹೇಬರ ಸಂವಿಧಾನಕ್ಕೆ ವಿರೂಪಗೊಳಿಸಿ, ಸಂವಿಧಾನದ ಆಶಯಗಳಿಗೆ ಧಕ್ಕೆತಂದು. ದೇಶದ ಸಂವಿಧಾನವೆ ಯಥಾಸ್ಥಿತಿಯಲ್ಲಿಟ್ಟು, ವಂಶ ಪರಂಪರೆಯ ರಾಜಕೀಯ ಜೀವಂತವಿಟ್ಟ, ಶ್ರೀಮಂತರನ್ನು ಸಿರಿತನದಲಿಟ್ಟು, ಬಡವರನ್ನು ಹೊಟ್ಟೆ, ಬಟ್ಟೆಗೆ ಪರದಾಡುವಂತೆ ಮಾಡುತ್ತಿರುವರ ಜೊತೆಗೆ ಕೈಜೋಡಿಸಿದವರಾರು? ಬಾಬಾ ಸಾಹೇಬರಿಗೆ ಮೋಸ ಮಾಡುತ್ತಿರುವವರಾರು? ಇಡೀ ವರ್ಷ ಬಾಬಾಸಾಹೇಬರ ಕುರಿತು ನಮ್ಮ ಸಮಾಜದ ಜನಗಳ ಮುಂದೆ ಜೋರು ಧ್ವನಿಯಲ್ಲಿ ಮಾತನಾಡಿ ಬೇಸ್ ಎನಿಸಿಕೊಂಡು, ನಾವೆಲ್ಲರೂ ಒಗ್ಗಟ್ಟಿನಿಂದ ಅಂಬೇಡ್ಕರರ ಕನಸುಗಳು ನನಸು ಮಾಡೋಣ, ಶಿಕ್ಷಿತರಾಗಿ ಸ್ವಾಭಿಮಾನದಲ್ಲಿ ಬಾಳೋಣ ಎನ್ನುವವರು ಯಾರಿಗೆ ಗುಲಾಮರಾಗುತ್ತಿದ್ದಾರೆ? ವೋಟು, ನೋಟು, ಕೋಟು, ದೊಡ್ಡ ದೊಡ್ಡ ಪದವಿಗಳು,ನೌಕರಿಗಳು ಎಲ್ಲವು ಬಾಬಾಸಾಹೇಬರಿಂದ ಪಡೆದುಕೊಂಡು ಯಾರಿಗೆ ಹರಕೆ ಹೊರುತ್ತಿದ್ದಾರೆ? ಯಾರಿಗೆ ಕೈ ಮುಗಿಯುತ್ತಿದ್ದಾರೆ? ಯಾವ ಅನಿವಾರ್ಯತೆಗಾಗಿ ಬಾಬಾಸಾಹೇಬರ ಮಾರ್ಗದ ವಿರುದ್ಧ ಚಮಚಾಗಿರಿಗೆ ಇಳಿಯುತ್ತಿದ್ದಾರೆ? ಈ ದೇಶದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ರಾಜ್ಯಾಧಿಕಾರದಲ್ಲಿದೆ ಎಂಬ ಸತ್ಯ ಬಾಬಾಸಾಹೇಬರರಿಂದ ತಿಳಿದನಾವು. ಬಾಬಾಸಾಹೇಬರ ನ್ನು ಬದುಕಿರುವಾಗಲೆ ಹೇಗೆ ಹೆಜ್ಜೆ ಹೆಜ್ಜೆಗೂ ಕಣ್ಣೀರ ಹಾಕಿಸಿ, ಅವಕಾಶ ವಂಚಿತರನ್ನಾಗಿ ಮಾಡಿದ ಇತಿಹಾಸ ಬಾಬಾಸಾಹೇಬರೆ ಸ್ವತಃ ತಮ್ಮ ಬರಹದ ಮೂಲಕ ಹೇಳಿರುವ ವಿಚಾರಗಳನ್ನು ನಾವು ಓದಿಕೊಂಡು, ಅರಿತುಕೊಂಡು ಕೂಡಾ ನಾವು ಯಾರ ಜಯದಲ್ಲಿ ಸಂಭ್ರಮಿಸುತಿದ್ದೇವೆ? ಯಾರನ್ನು ವರ್ಣಿಸಲು ನಾವೂ ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದೇವೆ. ನನ್ನ

ಜನ ತಮ್ಮ ಸ್ವಂತ ಶಕ್ತಿಯ ಮೇಲೆ ಈ ದೇಶ ಆಳಲಿ ಎಂದ ತಂದೆ ಅಂಬೇಡ್ಕರರ ಆಶಯದಂತೆ ನಮ್ಮ ಶಕ್ತಿ ಒಂದು ಕಡೆ ಸೇರುವುದು ಯಾವಾಗ? ಒಂದೆಡೆ ನಮ್ಮ ಶಕ್ತಿ ಸೇರಿಸಬೇಕಾದವರು ಯಾರು? ಚುನಾವಣೆಗಳು ಬಂದಾಗ,ಚದುರಿ ಹೋಗಿ ಬೇರೆಯವರ ದಾಳವಾಗಿ, ಅವರು ಆಡಿಸಿದಂತೆ ಆಡಿ, ನಮ್ಮ ನಮ್ಮ ಕೇರಿಗಳಿಗೆ, ಬಡಾವಣೆಗಳಿಗೆ ಮನುವಾದಿಗಳನ್ನು ಕರೆದುಕೊಂಡು ಬರುವವರಾರು? ಅವರಿಗೆ ಗೆಲ್ಲಿಸುತ್ತಿರುವವರಾರು? ಇದೆಲ್ಲ ನಾವೇ ಮಾಡಿ ಸಂವಿಧಾನ ಜಾರಿಯಾಗಲಿ, ಅಂಬೇಡ್ಕರ್ ಕನಸು ನನಸಾಗಲಿ ಎನ್ನುವ ನಮ್ಮಂತ ಶಿಕ್ಷಿತ ಶತ ಮೂರ್ಖರು, ಮೋಸಗಾರರು ಬೇರೆ ಇರುವರೆ? ರಾಮ ರಾಜ್ಯದ ಕನಸು ಕಟ್ಟಿಕೊಂಡು ಸಕ್ರಿಯವಾಗಿ ಮನುವಾದದ ಅಡಿಯಲ್ಲಿ ಬಲಿದಾನಗಳ ಮೂಲಕ, ಎಲ್ಲರನ್ನು ತಮ್ಮತ್ತ ಸೆಳೆದುಕೊಂಡು, ಸದಾ ಸಂವಿಧಾನ ವಿರೋಧಿ, ಮಹಾನ ಪುರುಷರ ವಿಚಾರಗಳ ವಿರುದ್ಧವೆ ತಂತ್ರ, ಕುತಂತ್ರಗಳು ಮಾಡುತ್ತ ಇಂದಿಗೆ 76 ವರ್ಷಗಳ ವರೆಗೂ ಅಧಿಕಾರದಲ್ಲಿರುವ ಮನುವಾದಿಗಳ ಕುರಿತು ನಾವು, ಅವರ ಮಾರ್ಗ ಅವರ ಗುರಿ ಉದ್ದೇಶಗಳ ಕುರಿತು ಸಮಾಜಕ್ಕೆ ತಿಳಿಸಿದ್ದೇವಾ? ಹೋಗಲಿ ಸಮಾಜಕ್ಕೆ ತಿಳಿಸಿ ಜಾಗೃತಿ ಮಾಡುವವರಿಗಾದ್ರು ಬೆಂಬಲಿಸಿ ದ್ದೇವಾ? ಭೀಮ್ ರಾಜ್ಯದ ಕನಸು ಕಟ್ಟಿಕೊಂಡು,ರಾಮ ರಾಮ ರಾಜ್ಯದವರಿಗೆ ಗೆಲ್ಲಿಸಿದರೆ ಭೀಮ್ ರಾಜ್ಯ ಕಟ್ಟಲು ಸಾಧ್ಯವೇ? ಆತ್ಮೀಯರೆ ನಾವು ಮಾಡಬೇಕಾದ ಕೆಲಸ ಬಹಳ ಇವೆ. ನಮ್ಮಪ್ಪ ಬಾಬಾಸಾಹೇಬರ ಕನಸುಗಳನ್ನು ಅವರ ಮಾರ್ಗದಲ್ಲಿಯೇ ಹೇಗೆ ಆ ಕನಸುಗಳು ನನಸು ಮಾಡಲು ಸಾಧ್ಯ ಎಂಬುದು ಕೂಡಾ ಅವರೇ ಹೇಳಿದ್ದಾರೆ, ಅವರೆ ಬರೆದಿದ್ದಾರೆ ಅವುಗಳನ್ನು ನಾವುಗಳು ಅಂದರೆ ವಿದ್ಯಾರ್ಥಿಗಳಾಗಿ, ರಾಜಕಾರಣಿಗಳಾಗಿ, ನೌಕರರಾಗಿ ಇನ್ನೂ ಮುಂದೆಯಾದರು ಬಹಳ ಪ್ರಾಮಾಣಿಕವಾಗಿ, ಅನುಸರಣೆ ಮಾಡಿ. ಅನುಸರಿಸಿ ಎಂದು ತಿಳಿಹೇಳೋಣ. ಹಾಗಾದರೆ ಏನು? ಅನುಸರಿಸೋಣ,ಏನು? ತಿಳಿ ಹೇಳೋಣ ಎಂದರೆ "ನಮ್ಮಪ್ಪ ಬಾಬಾಸಾಹೇಬರು ಹೇಗೆ ಬದುಕಿದ್ದಾರೆ ಹಾಗೆ ಬದುಕೋಣ – ಅವರ ಸಂದೇಶಗಳ ಪ್ರಕಾರ ಒಟ್ಟಾಗಿ ದುಡಿಯೋಣ – ಧಮ್ಮದ ಮಾರ್ಗದಲ್ಲಿ ಜೀವಿಸೋಣ – ನಮ್ಮ ಸ್ವಂತ ಶಕ್ತಿ ಮೇಲೆ ರಾಜ್ಯಾಧಿಕಾರ ಹಿಡಿದು ಆಳುವ ವರ್ಗವಾಗೋಣ. ಹಾಗಾದರೆ ರಾಜಕೀಯ ಪಕ್ಷ ಯಾವುದು? ಯಾರಿಗೆ ಮತ ಹಾಕೋಣ, ಯಾರಿಗೆ ನಮ್ಮ ನಾಯಕರೆಂದು ಒಪ್ಪಿಕೊಳ್ಳೋಣ ಎಂಬ ಎಲ್ಲಾ ಪ್ರಶ್ನೆಗಳಿಗೆ ಉತ್ತರ,ನಮ್ಮ ಮೇಲೆ ನಿಂತಿದೆ. ಅದು ಹೇಗೆಂದರೆ ಈಗ ಮೊದಲು ನಾವೂ ಮಾಡಬೇಕಾದ ಬಹು ಮುಖ್ಯ ಕೆಲಸವೆಂದರೆ "ನಮ್ಮ ನಮ್ಮ ತಪ್ಪುಗಳು ತಿದ್ದಿಕೊಂಡು, ದುಷ್ಟ ವೆಸನಕ್ಕೆ ಬಲಿಯಾಗುತ್ತಿರುವ ನಮ್ಮ ಹೊಸ ತಲೆಮಾರಿನ ಮಕ್ಕಳಿಗೆ ಸರಿ ದಾರಿಗೆ ತರುವುದು ಮತ್ತು ಪ್ರತಿಯೊಂದು ಹಳ್ಳಿಯಲ್ಲಿ, ಪಟ್ಟಣದ ನಮ್ಮ ಸಮುದಾಯದ ಭವನಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ಕೇಂದ್ರಗಳು ಅಥವಾ ಮಕ್ಕಳ ಉಚಿತ ಟ್ಯೂಷನ್ ಕೇಂದ್ರಗಳು ತೆರೆಯುವುದು. ಜೊತೆಗೆ ಮಕ್ಕಳಿಗೆ ಧಮ್ಮದ ವಿಚಾರಗಳು ಮತ್ತು ಬಾಬಾಸಾಹೇಬರ ನೈಜ ಹೋರಾಟ ಹಾಗೂ ಅವರ ಜೀವದೊಂದಿಗೆ ನಮಗೆ ನೀಡಿದ ಸಂದೇಶಗಳ ಕುರಿತು ಮತ್ತು ಈ ದೇಶದ ಸಂವಿಧಾನದ ಆಶಯಗಳು, ಪ್ರಸ್ತುತ ಸಂವಿಧಾನದ ಮೇಲಾಗುತ್ತಿರುವ ಧಾಳಿಗಳು, ಈ ಎಲ್ಲಾ ವಿಷಯಗಳ ಕುರಿತಂತೆ ಜಾಗೃತಿ ಮೂಡಿಸುವ ಕೆಲಸ ನನ್ನನ್ನು ಒಳಗೊಂಡು ಸಕ್ರಿಯವಾಗಿ, ಪ್ರಾಮಾಣಿಕವಾಗಿ ಮಾಡಬೇಕಾಗಿದೆ. ಸಾಧ್ಯವಾದರೆ ಓದು,ಬರಹ, ಭಾಷಣಗಳ ಮೂಲಕವು ಸಹ ಬಾಬಾಸಾಹೇಬರ ಚಳುವಳಿ ಇನ್ನೂ ವೇಗವಾಗಿ ಮುನ್ನಡೆಸಬೇಕಾಗಿದೆ. ಇದು ಎಲ್ಲವೂ ಮಾಡಿದರು ಸಹಿತ ನಮ್ಮ ಹೊಸ ತಲೆಮಾರಿನ ಬಂದುಗಳು ಬದಲಾಗದೆ ಮತ್ತೆ ಮನುವಾದಿಗಳ ಕಡೆ ಮುಖಮಾಡಿ, ಯಾರಿಗೋ ಮೆಚ್ಚಿಸಲು, ಯಾರಿಗೋ ಗೆಲ್ಲಿಸುವ ಮೂಲಕ, ಅಂಬೇಡ್ಕರ್ವಾದ ಮರೆತು ಅಂಬೇಡ್ಕರ್ ವಿರೋಧಿಗಳ ಜೊತೆಗೆ ನಿಂತರೆ ತಪ್ಪು ಅವರದಲ್ಲ ಚಳುವಳಿ ಮಾಡಿದ ನಮ್ಮದೇ ಎಂದು ಪ್ರಶ್ನೆ ಮಾಡದೆ ಒಪ್ಪಿಕೊಳ್ಳಬೇಕು. ಏಕೆಂದರೆ ನಾವು ನೈಜ ಅಂಬೇಡ್ಕರವಾದ ನಾವೂ ಓದಿಲ್ಲ, ಜನರಿಗೆ ನೈಜ ವಿಚಾರಗಳು ಬಿತ್ತಿಲ್ಲ ಎಂದರ್ಥ. ಆದರಿಂದ ನಮ್ಮ ಜನಗಳಿಗೆ ಮಹಾನಪುರುಷರ, ಅಂಬೇಡ್ಕರರ ಮತ್ತು ಸಂವಿಧಾನದ ವಿಚಾರಗಳೇ ತನ್ನ ಪ್ರಣಾಳಿಕೆಯನ್ನಾಗಿ ಮಾಡಿಕೊಂಡಿರುವ ಪಕ್ಷ, ಹುಡುಕಲು ಆಗಿಲ್ಲ, ಚಳುವಳಿಯೂ ಅರ್ಥವಾಗಿಲ್ಲ ಎಂದರ್ಥ. ಹೀಗೆ ನಾವೂ ಕೂಡ ನಮ್ಮ ಹಿಂದನವರು ನಮಗೆ ನೈಜ ಅಂಬೇಡ್ಕರವಾದ ತಿಳಿಸದ ಕಾರಣಕ್ಕಾಗಿಯೇ ನಾವು ಇಂದು ನಮ್ಮ ಸ್ವಂತ ಮನೆಬಿಟ್ಟು, ಬಾಬಾಸಾಹೇಬರ ವಿರೋಧಿಗಳ ಮನೆಯಲ್ಲಿ ಹೋಗಿ ಗುಲಾಮರಾಗಿ, ಬದುಕುತಿರೋದು. ಗುರಿ ಉದ್ದೇಶಗಳು ಇಲ್ಲದೆ ಬಹುಜನರಾದರು ಅಲ್ಲಲ್ಲಿ, ಹರಿದು ಹಂಚಿಹೋಗಿ ಬಾಬಾಸಾಹೇಬರ ಕನಸುಗಳು, ಸಂವಿಧಾನದ ಆಶಯಗಳು ತಟಸ್ಥವಾಗಿ ನಿಲ್ಲಿಸಿ, ಪರಿವರ್ತನ ಚಳುವಳಿಯ ರಥ ನಿಂತಲ್ಲೇ ನಿಲ್ಲಲು ಬಿಡದೆ, ಹಿಂದೆ ತಳ್ಳುವಂತ ಕೆಲಸ ಮಾಡ್ತಾ ಇರೋದು ಇದೆಂತ ದುರಂತ? ಒಟ್ಟಾರೆ ಈಗ ನೀವೇ ಹೇಳಿ ನಾವು ಬಾಬಾಸಾಹೇಬರ ಸಮುದಾಯದದಲ್ಲಿ ಜನಸಿದಕ್ಕೆ ಮಾತ್ರ ಅವರ ಮಕ್ಕಳಾಗಲು ಸಾಧ್ಯವೆ? ಅಂಬೇಡ್ಕರ್ ಸಮುದಾಯದಲ್ಲಿ ಜನಿಸಿದ ಮಾತ್ರಕ್ಕೆ ಅಂಬೇಡ್ಕರವಾದಿಯಾಗಲು ಸಾಧ್ಯವೇ? ಯಾರು ಬಾಬಾಸಾಹೇಬರು ಬದುಕಿದಂತೆ ಬದುಕುತ್ತಾರೊ, ಧಮ್ಮದ ಅಡಿಯಲ್ಲಿ ಜೀವಿಸುತ್ತಾರೊ ಅವರು ಮಾತ್ರ ಅಂಬೇಡ್ಕರವಾದಿಗಳಾಗಲೊ ಸಾಧ್ಯ. ಈಗ ನೀವೇ ಹೇಳಿ ನಾವು ಮಾಡಬೇಕಾದದ್ದೇನು? ಮಾಡುತ್ತಿರುವುದೇನು?


ISSN 2454-6054

# ಸಂವಾದ

ಜನವರಿ 2022 ರೂ. 40



ಅಕ್ಷರದ ಅವ್ವ
ಸಾವಿತ್ರಿ ಬಾಯಿ ಫುಲೆ



## ಸಂವಿಧಾನ ವಿರೋಧಿ ಮತಾಂತರ ನಿಷೇಧ ಕಾಯ್ದೆ

ಸಂಪಾದಕರೊಡನೆ ಸಂವಾದ

# ಇನ್ನೆಷ್ಟು ದಿನ ಹೀಗೆ ಮಾರಾಟವಾಗೋಣ?

**ಪಂಡಿತ ಬಿ ಮದಗುಣಕಿ**

ಪ್ರಿಯ ಸಂಪಾದಕರೇ,

ಡಾ. ಬಿ.ಆರ್.ಅಂಬೇಡ್ಕರ್ ಅಂದರೆ ಆಮ್ಲಜನಕವಿದ್ದಂತೆ ಹೇಗೆ ಆಮ್ಲಜನಕ ಇಲ್ಲದಿದ್ದರೆ ಜೀವಿಗಳು ಬದುಕುವುದಿಲ್ಲಯೋ, ಹಾಗೇ. ಅಂಬೇಡ್ಕರ ಅವರನ್ನು ಮರೆತರೆ ಭಾರತಕ್ಕೂ ಮತ್ತು ಭಾರತೀಯರಿಗೂ ಭವಿಷ್ಯವಿಲ್ಲ ಎಂಬ ಮಾತಿನೊಂದಿಗೆ ಈ ಲೇಖನ ಪ್ರಾರಂಭಿಸುತ್ತೇನೆ. ಡಿಸೆಂಬರ್ 6, 1956. ಇಡೀ ಭಾರತದಲ್ಲಿ ಕಣ್ಣೀರ ಕೋಡಿ ಹರಿದ ದಿನ. ಕತ್ತಲಲ್ಲಿದ್ದ ಭಾರತಕ್ಕೆ ಬೆಳಕಿನ ಕಿರಣ ನೀಡಿ, ವಿಶ್ವವೇ ಬೆರಗಾಗುವಂತೆ ಮಾಡಿದ್ದ, ಆಧುನಿಕ ಭಾರತದ ನಿರ್ಮಾತೃ, ಸಂವಿಧಾನ ಶಿಲ್ಪಿ, ಡಾ.ಬಾಬಾಸಾಹೇಬ್ ಅಂಬೇಡ್ಕರ್‌ರವರು ನಿಬ್ಬಾಣ ಹೊಂದಿದ ದಿನ. ಭಾರತದ ಕಣ್ತೆರೆಸಿ, ಸಮಾನತೆಯ ಬೀಜ ಬಿತ್ತಿ ಹೋದ ಆ ಮಹಾ ನಾಯಕನ ಹೋರಾಟದ ಫಲವನ್ನು ಇಡೀ ಭಾರತವೇ ಇಂದು ಉಣ್ಣುತ್ತಿದೆ. ಈ ದೇಶವನ್ನು ಉತ್ತಮ ದಾರಿಗೆ ಕೊಂಡೊಯ್ಯಲೆಂದೇ ಅವರು ಈ ಭಾರತದಲ್ಲಿ ಜನಿಸಿದರು ಎಂದೇ ಹೇಳಬಹುದು.

ಡಾ.ಅಂಬೇಡ್ಕರ್‌ರವರು ಭಾರತದಲ್ಲಿ ಜನಿಸದೇ ಇರುತ್ತಿದ್ದರೆ, ಇಂದು ಭಾರತದ ಪರಿಸ್ಥಿತಿ ಏನಾಗಿರುತ್ತಿತ್ತು ಎನ್ನುವುದನ್ನು ಯೋಚಿಸಲೂ ಸಾಧ್ಯವಾಗುತ್ತಿರಲಿಲ್ಲ. ಭಾರತದ ಬೀದಿಗಳಲ್ಲಿ ಚಿನ್ನ, ರತ್ನ, ವಜ್ರ, ವೈಢೂರ್ಯಗಳನ್ನು ಮಾರಾಟ ಮಾಡಲಾಗುತ್ತಿತ್ತು ಎನ್ನುವ ಇತಿಹಾಸವನ್ನು ನಾವು ಓದಿದ್ದೇವೆ. ಆದರೆ, ಅದೇ ಭಾರತದಲ್ಲಿ ಮನುಷ್ಯನನ್ನು ಮನುಷ್ಯನಂತೆ ಕಾಣಲಾಗುತ್ತಿರಲಿಲ್ಲ ಎನ್ನುವ ಸತ್ಯವನ್ನೂ ನಾವು ಒಪ್ಪಿಕೊಂಡಿದ್ದೇವೆ. ಇಂದು ಭಾರತದಲ್ಲಿ ಇಷ್ಟರ ಮಟ್ಟಿಗೆ ಸಮಾನತೆ, ನೆಮ್ಮದಿ ಇದೆ ಎಂದರೆ, ಡಾ. ಅಂಬೇಡ್ಕರ್‌ರವರು ನೀಡಿದ ಪವಿತ್ರ ಸಂವಿಧಾನದಿಂದ ಮಾತ್ರವೇ ಅದು ಸಾಧ್ಯವಾಗಿದೆ. ಎಲ್ಲ ನಾಯಕರು ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ ಸಿಗಬೇಕೆಂದು ಹೋರಾಟ ಮಾಡಿದರೆ, ಡಾ.ಬಿ.ಆರ್.ಅಂಬೇಡ್ಕರ್‌ರವರು ದೇಶದೊಳಗೆ ಜನರು ಸ್ವತಂತ್ರವಾಗಿ ಬದುಕಬೇಕು ಎಂದು ಕನಸು ಕಂಡರು, ಅದಕ್ಕಾಗಿ ಹೋರಾಟ ಮಾಡಿದರು. ಜಾತಿವಾದಿಗಳು, ಮನುವಾದಿಗಳ ನೂರಾರು ಸಂಚನ್ನು ಮುರಿದು, ಪವಿತ್ರವಾದ ಸಂವಿಧಾನವನ್ನು ಈ ದೇಶಕ್ಕೆ ಅರ್ಪಿಸಿದರು. ಭಾರತವು ಎರಡು ಹೋಳಾಗಿ ಭಾರತ–ಪಾಕಿಸ್ತಾನವಾದಾಗ ಡಾ. ಅಂಬೇಡ್ಕರ್‌ರವರು ಕೂಡ, ನಮಗೂ ಪ್ರತ್ಯೇಕ ರಾಷ್ಟ್ರಬೇಕು ಎಂದು ಹೋರಾಡಬಹುದಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಯಾಕೆಂದರೆ, ಅಂಬೇಡ್ಕರ್‌ರವರಂತಹ ಪ್ರಾಮಾಣಿಕ ರಾಷ್ಟ್ರಪ್ರೇಮಿ ಇಂದಿಗೂ ಯಾರೂ ಇಲ್ಲ. ಮುಂದೆಯೂ ಬರಲು ಸಾಧ್ಯವಿಲ್ಲ. ಡಾ.ಅಂಬೇಡ್ಕರ್‌ರವರು ಅಪ್ಪಟ ದೇಶಪ್ರೇಮಿಯಾಗಿದ್ದರು. ಅವರು ರಾಷ್ಟ್ರದ ಬಗ್ಗೆ ಏನು ಹೇಳುತ್ತಿದ್ದರೆಂದರೆ, "ನಾನು ಮೊದಲನೆಯದಾಗಿ ಮತ್ತು ಕೊನೆಯದಾಗಿಯೂ ಭಾರತೀಯ". ಡಾ.ಬಿ.ಆರ್. ಅಂಬೇಡ್ಕರ್‌ರವರ ಕೊನೆಯ ದಿನಗಳ ಬಗ್ಗೆ Last few years of Dr. Ambedkar ಎಂಬ ಕೃತಿಯಲ್ಲಿ ಅವರ ಆಪ್ತ ಕಾರ್ಯದರ್ಶಿ ನಾನಕ್‌ಚಂದ್ ರತ್ತು ಅವರು ಬರೆದಿದ್ದಾರೆ. ನಾನಕ್‌ಚಂದ್ ಅವರಿಗೆ ಆ ದಿನ ಎಂದೂ ಮರೆಯದ ದಿನವಾಗಿತ್ತು. ಅಂದು 1956ರ ಜುಲೈ 31ರ ಮಂಗಳವಾರ. ಸಮಯ 5:30ರ ವೇಳೆಗೆ ನಾನಕ್ ಚಂದ್ ಕೆಲವು ಪತ್ರಗಳನ್ನು ಹೊಂದಿಸಿಡುತ್ತಿದ್ದರು. ಆ ಸಮಯದಲ್ಲಿ ಬಾಬಾಸಾಹೇಬ್ ಅಂಬೇಡ್ಕರ್‌ರವರು ಅಸ್ವಸ್ಥರಾದರು. ಅದನ್ನು ಗಮನಿಸಿದ ರತ್ತು, ಅಂಬೇಡ್ಕರ್‌ರವರನ್ನು ವಿಚಾರಿಸಿದ ಬಳಿಕ, ಹೀಗೆ ಕೇಳಿದರು. "ಸರ್ ನೀವು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಖಿನ್ನತೆಗೆ ಒಳಗಾಗುತ್ತಿದ್ದೀರಿ, ಅದು ಯಾಕೆ ಎಂದು ನನಗೆ ತಿಳಿಯಬೇಕು ಎಂದು ಕೇಳುತ್ತಾರೆ. ಅಂದು ಬಾಬಾ ಸಾಹೇಬರು ನೀಡಿರುವ ಉತ್ತರವನ್ನು ಇಂದು ನಾವುಗಳು ಗಂಭೀರವಾಗಿ ತೆಗೆದುಕೊಂಡಿದ್ದರೆ, ಬಹುಶಃ ಇಂದಿಗೂ ದಲಿತ ಸಮುದಾಯ ಹಿಂದಿನ ಅದೇ ಸ್ಥಿತಿಯಲ್ಲಿ ಇರುತ್ತಿರಲಿಲ್ಲವೋ ಏನೋ, ನನಕ್ ಚಂದ್ರ ಅವರ ಪ್ರಶ್ನೆಗೆ ಉತ್ತರಿಸಲು ಆರಂಭಿಸಿದ ಅಂಬೇಡ್ಕರರು, ನಾನು ಬದುಕಿರುವಾಗಲೇ ನನ್ನ ಜೀವನದ ಗುರಿಯನ್ನು ಮುಟ್ಟಲು ಸಾಧ್ಯವಾಗಲಿಲ್ಲ. ನನ್ನ ಜನರು ದೇಶದ ಆಳುವ ವರ್ಗವಾಗಬೇಕು ಎಂದು ನಾನು ಬಯಸಿದ್ದೆ. ರಾಜಕೀಯ ಅಧಿಕಾರವನ್ನು ಸಮಾನತೆಯ ಆಧಾರದಲ್ಲಿ ಹಂಚಿಕೊಳ್ಳಬೇಕು ಎಂದು ನಾನು ಬಯಸಿದ್ದೆ. ಆದರೆ ಅದರ ಸಾಧ್ಯತೆಗಳು ನನಗೆ ಗೋಚರಿಸುತ್ತಿಲ್ಲ. ನಾನೇ ಏನಾದರೂ ಮಾಡುತ್ತೇನೆ ಎಂದು ಮುಂದುವರಿಯಬೇಕೆಂದುಕೊಂಡರೆ, ನನ್ನನ್ನು ಅನಾರೋಗ್ಯ ಬಾಧಿಸುತ್ತಿದೆ. ಈ ಅನಾರೋಗ್ಯದ ಕಾರಣದಿಂದಾಗಿ ನಾನು ನಿಶ್ಶಕ್ತನಾಗಿದ್ದೇನೆ. ನಾನು ಈವರೆಗೆ ಏನೆಲ್ಲ ಸಾಧಿಸಿದ್ದೇನೋ ಅದರ ಫಲವನ್ನು ಪಡೆದ ನನ್ನವ[ರು] ಕೆಲವೇ ಮಂದಿ ಅನುಭವಿಸುತ್ತಿದ್ದಾರೆ. ಶಿಕ್ಷಣ ಪಡೆದವರು ವಂಚನೆ ಮಾಡಿಕೊಂಡು ಅಯೋಗ್ಯರಾಗಿದ್ದಾರೆ. ತಮ್ಮ ವೈಯಕ್ತಿಕ ಹಿತಾಸಕ್ತಿಗ[ಳನ್ನು] ಸಾಧಿಸಿಕೊಂಡ ಇವರು ನನ್ನ ನಿರೀಕ್ಷೆಗಳನ್ನು ಸುಳ್ಳು ಮಾಡಿದ್ದಾರೆ. ಮೀಸಲಾತಿ ಪಡೆದುಕೊಂಡು ಸರ್ಕಾ[ರಿ] ಕೆಲಸ ಪಡೆದವರು ತಮ್ಮ ಸ್ವಾರ್ಥ ಸಾಧನೆಯನ್ನೇ ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಸಮುದಾಯದ ಸೇವೆ ಮಾಡಲು ಯಾರೂ ಮುಂ[ದೆ] ಬರುತ್ತಿಲ್ಲ. ಹಳ್ಳಿಗಳಲ್ಲಿ ಇನ್ನೂ ಜನರು ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಆರ್ಥಿಕವಾಗಿ ದುಸ್ಥಿತಿಯಲ್ಲಿದ್ದಾರೆ. ಈ ರೀತಿಯಾಗಿರುವ ಅನಕ್ಷರಸ್ಥ ವಿಶಾಲ ಜನಸಮುದಾಯದತ್ತ ಗಮನಹರಿಸಬೇಕು ಎಂದು ನಾನು ಯೋಚಿಸುತ್ತಿದೆ. ಆದರೆ, ನನಗೆ ಇರುವುದು ಇನ್ನು ಕೆಲವೇ ದಿನಗಳು ಎಂದು ಬಾಬಾಸಾಹೇಬರು ನೋವು ಪಟ್ಟರು.

ಅಂಬೇಡ್ಕರ್‌ರವರ ನೋವು ಇಂದಿಗೂ ನಿಜವೇ ಆಗಿದೆ ಅಲ್ಲವೇ? ಬಹಳಷ್ಟು ದಲಿತರು ಇಂದಿಗೂ ಉತ್ತಮ ಸ್ಥಿತಿವಂತರಾಗಿ ತಾವು, ತಮ್ಮ ಸಂಬಂಧಿಕರು ಎಂದೇ ನೋಡುತ್ತಿದ್ದಾರೆ. ತಮ್ಮ ಸಮುದಾಯದ ಒಂದಿಷ್ಟು ಮಕ್ಕಳನ್ನು ದತ್ತು ಪಡೆದು ಅವರ ಶಿಕ್ಷಣಕ್ಕೆ ನೆರವು ನೀಡುವ ನೌಕರರು ಎಂದು ಎಷ್ಟು ಜನ ಇದ್ದಾರೆ ಎಂದು ಕೇಳಿದರೆ, ಕೇವಲ ಬೆರಳೆಣಿಕೆಯ ನೌಕರರು ಮಾತ್ರವೇ ಸಿಗುತ್ತಾರೆ. ನಿರುದ್ಯೋಗಿ ಯುವಕರಿಗೆ ಉದ್ಯೋಗ ನೀಡಲು ಸಹಾಯ ಮಾಡುವ ನೌಕರರು ಎಷ್ಟು ಜನರಿದ್ದಾರೆ ಎಂದು ಯೋಚಿಸಿದರೆ, ಅಲ್ಲಿಯೂ ಕೇವಲ ಬೆರಳೆಣಿಕೆಯ ಜನರು ಸಿಗುತ್ತಾರೆ. ಸಮರ್ಥರು ಕೈಕಟ್ಟಿ ಕುಳಿತಿದ್ದ[ರೆ] ಸಾಧಾರಣ ಸ್ಥಿತಿವಂತರು ಇಂದು ಸಮಾಜ ಸುಧಾರಣೆ ಮಾಡಬೇಕು ಎಂದು ಹೊರಟಿದ್ದಾರೆ. ಆದರೆ ಅವರಲ್ಲಿ ಶಕ್ತಿ ಇಲ್ಲ. ಇಂತಹ ಸ್ಥಿತಿಯಲ್ಲಿ ಇಂದು ಸಮುದಾಯ ಅಧೋಗತಿಯತ್ತ ಪ್ರಯಾಣಿಸುತ್ತಿದೆ. ಅಂಬೇಡ್ಕರ್‌ರವರು ಇಂತಹ ದುಸ್ಥಿತಿಯನ್ನು ನೆನೆದು ಅಂದು ಕಣ್ಣೀರು ಹಾಕಿದ್ದ[ರು]. ತನ್ನ ಸಮುದಾಯ ಆಳುವ ವರ್ಗವಾಗಬೇಕು. [ಸಾ]ವರ್ಷಗಳಿಂದ ಭಾರತದಲ್ಲಿ ಪ್ರಾಣಿಗಳಿಗಿಂತಲೂ ಕೀಳಾಗಿ ನಡೆಸಲಾಗಿದ್ದ ಅಸ್ಪೃಶ್ಯ ಸಮುದಾಯವನ[್ನು] ಮೇಲೆತ್ತಬೇಕು, ಅವರು ಸ್ವಾಭಿಮಾನದಿಂದ ಬದುಕುವಂತಾಗಬೇಕು. ಅವರು ಸ್ವಾಭಿಮಾನದಿಂ[ದ] ಬದುಕುವಂತಾಗಬೇಕಾದರೆ ಅವರು ಆಳುವ ವರ್ಗವಾಗಬೇಕು ಎಂದು ಅವರು ನಿರೀಕ್ಷಿಸಿದ್ದರು. ಆದರೆ, ಸಮುದಾಯದಲ್ಲಿ ಅಭಿವೃದ್ಧಿ ಹೊಂದಿದ[ವರು] ಅವರ ಸ್ವಾರ್ಥವನ್ನು ಇಂದಿಗೂ ನೋಡುತ್ತಿದ್ದಾರೆ[ಯೇ] ಹೊರತು, ಸಮುದಾಯದ ಅಭಿವೃದ್ಧಿಗೆ ಅವರಿಂ[ದ] ಯಾವುದೇ ಸಹಾಯವೂ ಸಿಗುತ್ತಿಲ್ಲ. ಹೀಗಾಗಿಯೆ ಇಂದಿಗೂ ಈ ಸಮುದಾಯದ ಬಡವರು ಶೈಕ್ಷಣಿ[ಕ] ರಾಜಕೀಯವಾಗಿ ಮೇಲೆ ಬರಲಾಗದೇ ತನ್ನ ಸಮುದಾಯದ ಒಳಗೆಯೇ ನಿರ್ಲಕ್ಷ್ಯಕ್ಕೊಳಗಾಗಿದ[್ದಾರೆ]. ಅಂಬೇಡ್ಕರ್‌ರವರು ತಮ್ಮ ಮನಸ್ಸಿನಲ್ಲಿದ್ದ ನೋವ[ನ್ನು]

**ಡಾ.ಅಂಬೇಡ್ಕರ್‌ರವರು ಭಾರತದಲ್ಲಿ ಜನಿಸದೇ ಇರುತ್ತಿದ್ದರೆ, ಇಂದು ಭಾರತದ ಪರಿಸ್ಥಿತಿ ಏನಾಗಿರುತ್ತಿತ್ತು ಎನ್ನುವುದನ್ನು ಯೋಚಿಸಲೂ ಸಾಧ್ಯವಾಗುತ್ತಿರಲಿಲ್ಲ. ಭಾರತದ ಬೀದಿಗಳಲ್ಲಿ ಚಿನ್ನ, ರತ್ನ, ವಜ್ರ, ವೈಢೂರ್ಯಗಳನ್ನು ಮಾರಾಟ ಮಾಡಲಾಗುತ್ತಿತ್ತು ಎನ್ನುವ ಇತಿಹಾಸವನ್ನು ನಾವು ಓದಿದ್ದೇವೆ. ಆದರೆ, ಅದೇ ಭಾರತದಲ್ಲಿ ಮನುಷ್ಯನನ್ನು ಮನುಷ್ಯನಂತೆ ಕಾಣಲಾಗುತ್ತಿರಲಿಲ್ಲ ಎನ್ನುವ ಸತ್ಯವನ್ನೂ ನಾವು ಒಪ್ಪಿಕೊಂಡಿದ್ದೇವೆ. ಇಂದು ಭಾರತದಲ್ಲಿ ಇಷ್ಟರ ಮಟ್ಟಿಗೆ ಸಮಾನತೆ, ನೆಮ್ಮದಿ ಇದೆ ಎಂದರೆ, ಡಾ.ಅಂಬೇಡ್ಕರ್‌ರವರು ನೀಡಿದ ಪವಿತ್ರ ಸಂವಿಧಾನದಿಂದ ಮಾತ್ರವೇ ಅದು ಸಾಧ್ಯವಾಗಿದೆ. ಎಲ್ಲ ನಾಯಕರು ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ ಸಿಗಬೇಕೆಂದು ಹೋರಾಟ ಮಾಡಿದರೆ, ಡಾ.ಬಿ.ಆರ್.ಅಂಬೇಡ್ಕರ್‌ರವರು ದೇಶದೊಳಗೆ ಜನರು ಸ್ವತಂತ್ರವಾಗಿ ಬದುಕಬೇಕು ಎಂದು ಕನಸು ಕಂಡರು, ಅದಕ್ಕಾಗಿ ಹೋರಾಟ ಮಾಡಿದರು.**



ರತ್ತು ಬಳಿಯಲ್ಲಿ ಹೇಳುತ್ತಾ, "ಬುದ್ಧ ಮತ್ತು ಕಾರ್ಲ್‌ಮಾರ್ಕ್ಸ್", "ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ", ಹಿಂದೂ ಧರ್ಮದ ಒಗಟುಗಳು ಎನ್ನುವ ನನ್ನ ಎಲ್ಲಾ ಕೃತಿಗಳನ್ನು ಜೀವಿತಾವಧಿಯಲ್ಲಿಯೇ ಪ್ರಕಟಿಸಬೇಕು ಎಂದು ನಾನು ಬಯಸಿದ್ದೆ, ಆದರೆ ಅವುಗಳನ್ನು ಹೊರತರಲೂ ನನ್ನಿಂದ ಸಾಧ್ಯವಾಗುತ್ತಿಲ್ಲವಲ್ಲ, ಅದು ಮುಂದೆಂದಾದರೂ ಪ್ರಕಟವಾಗಬಹುದು ಎಂದು ನಾನು ಅಂದುಕೊಂಡರೂ ಆ ಸಾಧ್ಯತೆಗಳು ನನಗೆ ಕಾಣುತ್ತಿಲ್ಲ. ನನ್ನ ಚಳುವಳಿಯನ್ನು ಶೋಷಿತ ಸಮುದಾಯದಿಂದ ಬಂದ ಯಾರಾದರೂ ಮುನ್ನಡೆಸುತ್ತಾರೆ ಎಂದು ನಾನು ನಿರೀಕ್ಷಿಸಿದ್ದೆ, ಆದರೆ ಅಂತಹವರು ಯಾರೂ ನನಗೆ ಈ ಸಂದರ್ಭದಲ್ಲಿ ಕಾಣುತ್ತಿಲ್ಲ. ನಾನು ಯಾರ ಮೇಲೆ ನಿರೀಕ್ಷೆಗಳನ್ನು ಇಟ್ಟುಕೊಂಡಿದ್ದೆನೋ, ಅವರು ಈ ಜವಾಬ್ದಾರಿಯ ಬಗ್ಗೆ ಗಮನಹರಿಸುತ್ತಿಲ್ಲ. ಅವರು ನಾಯಕತ್ವಕ್ಕಾಗಿ, ಅಧಿಕಾರಕ್ಕಾಗಿ ತಮ್ಮಲೇ ಹೋರಾಡುತ್ತಿದ್ದಾರೆ. ನನ್ನ ದೇಶದ ಜನತೆಗೆ ಸೇವೆ ಸಲ್ಲಿಸುವ ಆಸೆ ನನಗೆ ಇನ್ನೂ ಇದೆ. ಪೂರ್ವಾಗ್ರಹ ಪೀಡಿತ ಜಾತಿ ಎಂಬ ರೋಗವನ್ನು ಅಂಟಿಸಿಕೊಂಡಿರುವ ಜನರೇ ಇಲ್ಲಿ ತುಂಬಿದ್ದಾರೆ. ಹಾಗೆಯೇ ಈಗಿರುವ ವ್ಯವಸ್ಥೆಯಲ್ಲಿ ದೇಶಕ್ಕೆ ಸಂಬಂಧಪಟ್ಟಂತೆ ಯಾರಾದರೊಬ್ಬರು ತಮ್ಮವೈಯಕ್ತಿಕ ಅಭಿಪ್ರಾಯಗಳನ್ನು ಮಂಡಿಸುವುದು ತುಂಬಾ ಕಷ್ಟ. ಏಕೆಂದರೆ ಇಲ್ಲಿಯ ಜನರು ಈ ದೇಶದ ಪ್ರಧಾನಿ (ನೆಹರು)ಗೆ ಒಗ್ಗದಂತಹ ಯಾವುದೇ ವಿಚಾರಗಳನ್ನು ಕೇಳುವ ತಾಳ್ಮೆಯನ್ನು ಹೊಂದಿಲ್ಲ. ಈ ದೇಶ ಇನ್ನೆಲ್ಲಿಗೆ ಹೋಗಿ ಮುಳುಗುತ್ತದೆಯೋ ಎಂದು ಅವರು ಸಂಕಟ ಅನುಭವಿಸುತ್ತಾರೆ.ಅಂಬೇಡ್ಕರ್ ಅವರ ಧ್ವನಿಯಲ್ಲಿ ಕಂಪನ ಆರಂಭವಾಗುತ್ತದೆ "ಧೈರ್ಯ ತಂದು ಕೊಡುತ್ತೆ ನೀನು ಎದೆ ಗುಂದಬೇಡ, ಜೀವನ ಯಾವಾಗಲಾದರೂ ಕೊನೆಗೊಳ್ಳಲೇಬೇಕು. ನನ್ನ ಜನರಿಗೆ ಹೇಳುನಾನು ಇಲ್ಲಿಯವರೆಗೆ ಏನನ್ನು ಸಾಧಿಸಿದ್ದೇನೋ, ಅದನ್ನು ನನ್ನ ಶತ್ರುಗಳ ವಿರುದ್ಧ ಹೋರಾಡುತ್ತಾ, ಹಲವಾರು ಸಮಸ್ಯೆಗಳನ್ನು ಎದುರಿಸುತ್ತಾ, ನಿರಂತರವಾಗಿ ನೋವುಗಳ ಸರಮಾಲೆಯನ್ನೇ ಅನುಭವಿಸುತ್ತಾ ಸಾಧಿಸಿದ್ದೇನೆ. ಈ ವಿಮೋಚನಾ ರಥವನ್ನು ಈಗ ಅದು ಎಲ್ಲಿದೆಯೋ ಅಲ್ಲಿಯವರೆಗೆ ತಂದಿದ್ದೇನೆ.ಏನೇ ಆದರೂ ಈ ರಥ ಮುನ್ನಡೆಯಲೇಬೇಕು. ರಥವನ್ನು ಮುನ್ನಡೆಸಲು ಸಾಧ್ಯವಾಗದಿದ್ದರೆ. ಅದು ಎಲ್ಲಿದೆಯೋ ಅಲ್ಲಿಯೇ ಇರಲು ಬಿಡಿ. ಯಾವುದೇ ಕಾರಣಕ್ಕೂ ಅದನ್ನು ಹಿಂದಕ್ಕೆ ಸರಿಯಲು ಬಿಡಬೇಡಿ ಇದು ನನ್ನ ಕೊನೆಯ ಸಂದೇಶ, ಇದನ್ನು ನನ್ನ ಜನರಿಗೆ ತಲುಪಿಸು ಎಂದು ಹೇಳುತ್ತಾರೆ. ಇದು ಡಾ.ಅಂಬೇಡ್ಕರರ ಕೊನೆಯ ಮಾತುಗಳು. ಅಂದು ರತ್ತು ಜೊತೆಗೆ ಇಷ್ಟೆಲ್ಲ ಮಾತುಗಳನ್ನಾಡಿದ್ದ, ಡಾ.ಬಿ.ಆರ್.ಅಂಬೇಡ್ಕರ್ ಅವರು ನಿದ್ದೆಗೆ ಜಾರಿದ್ದರು. ಮರುದಿನ ಎದ್ದೇಳಲೇ ಇಲ್ಲ. ಅಂಬೇಡ್ಕರ್ ಅವರು ನಿಧನರಾಗಿದ್ದರು. ಇಡೀ ದೇಶವೇ ಸ್ತಬ್ಧವಾಗಿತ್ತು. ಅಂಬೇಡ್ಕರ್ ಅವರ ಕಾಲಿಗೆ ಅಡ್ಡವಾಗುತ್ತಾ, ಪ್ರತಿನಿತ್ಯ ತೊಂದರೆ ಕೊಡುತ್ತಿದ್ದ ದೊಡ್ಡ ದೊಡ್ಡ ನಾಯಕರು ಎನಿಸಿಕೊಂಡಿದ್ದವರೆಲ್ಲರೂ ಆದಿನ ಕಣ್ಣೀರು ಹಾಕಿದರು. ಅಂಬೇಡ್ಕರ್ ಅಂದರೆ ಅವರೊಂದು ವ್ಯಕ್ತಿಯಾಗಿರಲಿಲ್ಲ, ಅವರು ಈ ದೇಶದ ಶಕ್ತಿಯಾಗಿದ್ದರು. ಅದು ಅಂದಿಗೂ ಇಂದಿಗೂ ಎಂದೆಂದಿಗೂ. ಆದರೆ ಒಂದಂತೂ ಸತ್ಯ ಭಾರತೀಯರಿಗೊ, ಭಾರತಕ್ಕೊ ವಿಮೋಚನೆ ನೀಡ ಬೇಕೆಂದು ಸತತ ಹಗಲಿರುಳು ಎನ್ನದೆ, ಆರೋಗ್ಯವನ್ನೂ ಲೆಕ್ಕಿಸದೆ, ಸಮಯಕ್ಕೆ ಸರಿಯಾಗಿ ಊಟ, ನಿದ್ರೆ ಮಾಡದೆ, ಜೀವಿತದುದ್ದಕ್ಕೂ ಈ ದೇಶಕ್ಕಾಗಿ, ಜನರಿಗಾಗಿ ತಮ್ಮ ಬದುಕನ್ನೇ ಸವೆಸಿದ ಡಾ.ಅಂಬೇಡ್ಕರ್ ಅವರ ಸಾವು ರಾಷ್ಟ್ರೀಯ ಸಾವೇ ಹೊರತು, ವೈಯಕ್ತಿಕ ಸಾವಲ್ಲ. ಹೀಗಾಗಿ ಬಾಬಾ ಸಾಹೇಬರ ಬಹು ದೊಡ್ಡ ಋಣ ಈ ದೇಶದ ಮೇಲೆ ಮತ್ತು ಜನರ ಮೇಲಿದೆ. ತಮ್ಮ ಜೀವನವೇ ಈ ದೇಶಕ್ಕಾಗಿ, ನಮಗಾಗಿ ತ್ಯಾಗ ಮಾಡಿದ, ಡಾ. ಅಂಬೇಡ್ಕರ್ ಅರವರಿಗಾಗಿ ನಾವೇನು ಮಾಡಿದ್ದೇವೆ? ಎಂಬ ಪ್ರಶ್ನೆ ನಮಗೆ ನಾವೇ ಹಾಕಿಕೊಂಡರೆ ನಾವು ಮೌನಿಗಳಾಗುತ್ತೇವೆ.ಆದ್ದರಿಂದ ನಾವೂ ಬದುಕುವುದಾದರೂ ಎಷ್ಟು ದಿನ, ಇನ್ನೆಷ್ಟು ದಿನ ಹೀಗೆ ಮಾರಾಟವಾಗೋದು, ನಾವೆಲ್ಲರೂ ಮಾರಾಟದ ವಸ್ತುವಾದರೆ ಡಾ.ಅಂಬೇಡ್ಕರ್ ವಾದ ಮುನ್ನಡೆಸುವವರು ಯಾರು? ಇನ್ನಾದರೂ ಭವಿಷ್ಯತ್ತಿನ ಭಾರತಕ್ಕಾಗಿ, ಮುಂದಿನ ಪೀಳಿಗೆಗಾಗಿ, ಬಾಬಾಸಾಹೇಬರು ತೋರಿಸಿದ ಮಾರ್ಗದಲ್ಲಿ ಸಾಗೋಣ, ಆಳುವ ವರ್ಗವಾಗೋಣ. ಒಂದು ನೆನಪಿರಲಿ ನಮಗೆ ನಮ್ಮ ತಂದೆ ತಾಯಿಗಳು ಬರಿ ಜನ್ಮ ನೀಡಿರಬಹುದು, ಆದರೆ ನಮಗೆ ಸ್ವಾಭಿಮಾನದ ಬದುಕು ನೀಡಿದ್ದು ಡಾ.ಅಂಬೇಡ್ಕರ್ ರವರು ಬರೆದ ಈ ದೇಶದ ಸಂವಿಧಾನ ಎಂಬುವುದು ಸೂರ್ಯನಷ್ಟೆ ಸತ್ಯ. □